

ಕುಳಿತಿರುವ ಹೆಂಗೂಸುಗಳಿಗಿಂತ ಪುಟ್ಟಗೌರಿಯ ಮದುವೆಯದೇ ದೊಡ್ಡ ಚಿಂತೆಯಾಗಿದೆ. ಅಗ್ನಿಸಾಕ್ಷಿಯಾಗಿ ತಾಳಿ ಕಟ್ಟಿದ ಗಂಡನ ನೂರಾರು ಪಡಿಪಾಟಲುಗಳಿಗಿಂತ ಆ ಹೆಸರಿನ ಧಾರಾವಾಹಿಯ ನಾಯಕನ ಭವಿಷ್ಯದ ಬಗೆಗಿನ ಆತಂಕವೇ ಹೆಚ್ಚಾಗಿದೆ! 'ಟೀವಿ ನೋಡುವುದೆಂದರೆ ಮತ್ತೇನಲ್ಲ, ನಿಮ್ಮ ಮೂರನೇ ಕಣ್ಣಿಗೆ ಮಸಿ ಬಳಿದುಕೊಳ್ಳುವುದಷ್ಟೇ' ಅಂತ ಬಿಲ್ ಹಿಕ್ಸ್ ಮಹಾಶಯ ಹೇಳಿದ್ದು ಅದಕ್ಕೇ ಇರಬೇಕು. ಅಷ್ಟಲ್ಲದೆ ಟೀವಿಯನ್ನು ಮನುಕುಲದ ಮೇಲೆ ಮೇಲುಗೈ ಸಾಧಿಸಿದ ಮಶೀನು ಅಂತ ಹೇಳಿದ್ದಾರೆಯೇ?

ಈ ಕಿರುತೆರೆ ಎಂಬ ಮಾಯಾಸುರ ಮನುಷ್ಯರ ಮೇಲೆ ಮಾಡಿ ಹಾಕಿರುವ ಮೋಡಿ ಅಂತಿಂಥಾದ್ದಲ್ಲ. ಇದೊಂದು ರೀತಿಯಲ್ಲಿ ಪ್ರತಿಯೊಬ್ಬರೂ ಅಪಾಯವೆಂದು ಕರೆದು ವಿರೋಧಿಸುವ, ಆದರೆ ಯಾರೂ ಬಿಟ್ಟಿರಲು ಬಯಸದ ಅನಿವಾರ್ಯ ಕರ್ಮದಂತೆ ಈ ಮನುಷ್ಯ ಸಮಾಜಕ್ಕೆ ಅಂಟಿಕೊಂಡಿದೆ. ಭಯಾನಕ ವೇಗದಲ್ಲಿ ಮನುಕುಲದ ಬೆಂಬತ್ತಿಕೊಂಡೇ ಬರುತ್ತಿದೆ. ಏನು ಕೆಲಸ ಹೇಳಿದರೂ ಸಮಯವಿಲ್ಲ ಎಂದು ಗೋಳಾಡುವ ಬುದ್ಧಿವಂತ ಪ್ರಾಣಿಯಾದ ಮನುಷ್ಯನನ್ನೇ ಈ ಟೀವಿಯು ಆಟವಾಡಿಸುತ್ತಿದೆ. ಆದರೆ ನಿಜವಾದ ಪ್ರಾಣಿಗಳು ಇದರ ಬಗ್ಗೆ ಗೊತ್ತೂ ಇರದೆ ತಮ್ಮ ಲೋಕದಲ್ಲಿ ತಾವು ಆರಾಮಾಗಿವೆ. ಸಹಜವಾಗಿರುವ ಬದುಕನ್ನು ಅನಗತ್ಯವಾಗಿ ಸಂಕೀರ್ಣಗೊಳಿಸಿರುವ ನಮ್ಮ ಅವಿಷ್ಕಾರಗಳನ್ನು ನೋಡಿ, 'ಇವನ್ಯಾವ ಸೀಮೆ 'ಬುದ್ಧಿವಂತ ಪ್ರಾಣಿ'?' ಎಂದು ಅವು ನಗಾಡಿಕೊಳ್ಳುತ್ತಿರಬಹುದೇ ಎಂದು ನನಗೊಂದು ಸಣ್ಣ ಅನುಮಾನ!

ಸರಿಸುಮಾರು ಒಂದು ಶತಮಾನದ ಹಿಂದೆ ಈ ಮಾಯಾಪೆಟ್ಟಿಗೆಯನ್ನು ಅವಿಷ್ಕರಿಸಿದ ಬ್ರಿಟಿಷ್ ವಿಜ್ಞಾನಿ ಜಾನ್ ಲೋಗಿ ಬಿಯರ್ಡ್‌ಗೂ, ಅದಕ್ಕೆ ಟೆಲಿವಿಷನ್ ಎಂಬ ಹೆಸರಿಟ್ಟ ಪರ್ಸ್ಕಿಗೂ ಈ ವಾಮನರೂಪಿಯು ಮುಂದೆ ಹೀಗೆ ನೆಲ ಮುಗಿಲುಗಳನ್ನು ಆವರಿಸಿಕೊಂಡು ಬೆಳೆಯಬಹುದೆಂಬ ಕಲ್ಪನೆ ಕೂಡ ಇದ್ದಿರಲಿಕ್ಕಿಲ್ಲ ಎನಿಸುತ್ತದೆ. ಏಕೆಂದರೆ ಅವಿಷ್ಕಾರಗೊಂಡು ಎರಡು ವರ್ಷವಾದರೂ ಇದನ್ನು ಕೇಳುವವರು ದಿಕ್ಕಿರಲಿಲ್ಲ. ದೈತ್ಯ ಮಾಧ್ಯಮ ಸಂಸ್ಥೆ ಬಿಬಿಸಿಯು ಇದನ್ನು ಒಪ್ಪಿಕೊಳ್ಳಲು ಎರಡು ವರ್ಷ ತೆಗೆದುಕೊಂಡರೆ, ಅಧಿಕೃತವಾಗಿ ತನ್ನ ಟೀವಿ ಪ್ರಸಾರವನ್ನು ಆರಂಭಿಸಲು ಅನಾಮತ್ತು ಐದು ವರ್ಷಗಳನ್ನು ತೆಗೆದುಕೊಂಡಿತು! ಅದಾಗಿ ಮತ್ತೈದು ವರ್ಷಗಳಾದ ಮೇಲೆ ವಾಣಿಜ್ಯ ಪ್ರಸಾರವನ್ನು ಆರಂಭಿಸಿತು. ಅದನ್ನೊಂದು ಸಮೂಹ ಮಾಧ್ಯಮವಾಗಿ ಒಪ್ಪಿಕೊಳ್ಳಲಿಕ್ಕೇ ಮಾಧ್ಯಮ ಲೋಕ ಹೀಗೆ ಹಿಂದೇಟು ಹಾಕಿದ್ದನ್ನು ಇವತ್ತು ಹೇಳಿದರೆ ಯಾರೂ ನಂಬಲಿಕ್ಕಿಲ್ಲ. ಆದರೆ ತನಗಿಂತ ಮುಂಚೆ ಅದಾಗಲೇ ಚಾಲ್ತಿಯಲ್ಲಿದ್ದ ಮುದ್ರಣ, ಸಿನಿಮಾ ಮತ್ತು ರೇಡಿಯೊ ಎಂಬ ಸಮೂಹ ಮಾಧ್ಯಮಗಳನ್ನು ಹಿಂದಿಕ್ಕಿ ದೇಶ–ಭಾಷೆಗಳ ಗಡಿ ಮೀರಿ ಬೆಳೆದು ನಿಂತಿದ್ದು ಮಾತ್ರ ಟೀವಿಯ ಹೆಗ್ಗಳಿಕೆ. ಇವತ್ತು ಸಾವಿಲ್ಲದ ಮನೆಯ ಸಾಸಿವೆ ಹೇಗೆ ದುರ್ಲಭವೋ ಥೇಟು ಹಾಗೇ ಆಗಿದೆ ಟೀವಿಲ್ಲದ ಮನೆಯ ಸಾಸಿವೆ!

ಟೀವಿ ಇಂದು ಬೆಳಿಗ್ಗೆ ಬೇಗ ಏಳುವವರ ಜೊತೆಗೇ ಎದ್ದು, ಹಗಲೆಲ್ಲ ಅವಿರತವಾಗಿ ಆಡಿ–ಹಾಡಿ–ಮಾತಾಡಿ, ರಾತ್ರಿ ಮನೆಯ ಕಟ್ಟಕಡೆಯ ಸದಸ್ಯನನ್ನು ಮಲಗಿಸಿದ ಮೇಲೇ ತಾನು ವಿರಮಿಸುತ್ತದೆ. ಆದರೆ ಹಾಗಂತ ಕಾರ್ಯಕ್ರಮಗಳೇನಾದರೂ ಮುಗಿದಿರುತ್ತವೆಯಾ ಎಂದರೆ ಸಾಧ್ಯವಿಲ್ಲ, ದಿನದ ಇಪ್ಪತ್ನಾಲ್ಕೂ ತಾಸು ಅವು ನಂದಾದೀಪದಂತೆ ಬೆಳಗುತ್ತಲೇ ಇರುತ್ತವೆ. ಎದ್ದು ನೋಡುವವರಿರಬೇಕಷ್ಟೇ. ನಿಜವೆಂದರೆ ಟೀವಿಗೆ ರಾತ್ರಿಯೇ ಇಲ್ಲ. ಅದು ರಾತ್ರಿಯ ಭಯವನ್ನು, ಕತ್ತಲಿನ ಭಯವನ್ನು, ಏಕಾಂತದ ಭಯವನ್ನು ಮೀರಲು ಮನುಷ್ಯನಿಗೆ ನೆರವಾಗಲೆಂದು ಸೃಷ್ಟಿಯಾದ ಒಂದು ಶಾಶ್ವತವಾದ ಸುಳ್ಳುಹಗಲು! ನಮ್ಮನ್ನು ಕುಳಿತಲ್ಲೇ ಕೊಳೆಯಿಸಿಬಿಡುವಂಥ ಒಂದು ಮಾಯಕವಾದ ಹುಸಿಹುದುಲು! ಅಷ್ಟಲ್ಲದೆ 'ಟೀವಿಯೆಂದರೆ ಬೇರೇನಲ್ಲ, ಅದು ಸದಾಕಾಲ